# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸಮಸ್ಯೆ ಮತ್ತು ಸವಾಲುಗಳು

**ಅನುಷ ಹೆಚ್.ಸಿ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಜಗದ್ಗುರು ಫಕೀರೇಶ್ವರ ಸರಕಾರಿ ಪ್ರಥಮ ದರ್ಜೆ ಕಾಲೇಜು, ಶಿರಹಟ್ಟಿ, ಗದಗ

DOI: https://doi.org/10.5281/zenodo.18700454

## ABSTRACT:

ಕನ್ನಡ ಸಾಹಿತ್ಯ ಚರಿತ್ರೆಯು ಸಂಸ್ಕೃತ ಮತ್ತು ಇಂಗ್ಲೀಷ್ ವಸಾಹತುಶಾಹಿ ಪ್ರಭಾವಗಳಿಂದ ರೂಪುಗೊಂಡ ವೈವಿಧ್ಯಮಯ ಘಟ್ಟಗಳನ್ನು ಒಳಗೊಂಡಿದೆ. ಆಧುನಿಕತೆಯು ಪಶ್ಚಿಮದ ಅನುಕರಣೆಯಾಗಿ ಮಾರ್ಪಟ್ಟಾಗ, ಅದರ ನ್ಯೂನತೆಗಳನ್ನು ನೀಗಲು 'ಆಧುನಿಕೋತ್ತರ' ಚಿಂತನೆಗಳು ಮುನ್ನೆಲೆಗೆ ಬಂದವು. ಕವಿರಾಜಮಾರ್ಗದಿಂದ ಹಿಡಿದು ಸಮಕಾಲೀನ ದಲಿತ, ಬಂಡಾಯ ಹಾಗೂ ಸ್ತ್ರೀವಾದಿ ಸಾಹಿತ್ಯದವರೆಗೆ ಕನ್ನಡ ಸಾಹಿತ್ಯವು ಸದಾ ಬಹುತ್ವವನ್ನು ಉಳಿಸಿಕೊಂಡು ಬಂದಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಯಾವುದೇ ನಿರ್ದಿಷ್ಟ ಪಂಥ ಅಥವಾ ಕೇಂದ್ರವಿಲ್ಲದೆ, ಸಾಹಿತ್ಯವು ವಿಕೇಂದ್ರೀಕರಣಗೊಂಡು ಅನೇಕ ಕಾಲುದಾರಿಗಳಾಗಿ ಒಡೆದಿದೆ. ಈ ಬಹುತ್ವದ ನಡುವೆ ಸತ್ಯಗಳು ಛಿದ್ರಗೊಂಡು ಅರಾಜಕತೆ ಸೃಷ್ಟಿಯಾಗದಂತೆ, ಎಲ್ಲ ವಿಭಿನ್ನ ದನಿಗಳನ್ನು ಸಾಮರಸ್ಯದಿಂದ ಒಪ್ಪಿಕೊಳ್ಳುವುದು ಇಂದಿನ ಸಾಹಿತ್ಯದ ಮುಂದಿರುವ ಪ್ರಮುಖ ಸವಾಲಾಗಿದೆ.

## KEYWORDS:

ಆಧುನಿಕೋತ್ತರವಾದ, ವಸಾಹತುಶಾಹಿ, ಬಹುತ್ವ, ವಿಕೇಂದ್ರೀಕರಣ, ಸಮಕಾಲೀನ ಕನ್ನಡ ಸಾಹಿತ್ಯ.

ಆಧುನಿಕ ಮತ್ತು ಆಧುನಿಕೋತ್ತರ ಎನ್ನುವ ಪರಿಭಾಷೆಗಳು ವಿಶ್ವ ಸಂಸ್ಕೃತಿಯಲ್ಲುಂಟಾದ ಎರಡು ಸ್ಥಿತ್ಯಂತರಗಳನ್ನು ಪ್ರತಿನಿಧಿಸುತ್ತವೆ. 18ನೇ ಶತಮಾನದ ಹೊತ್ತಿಗೆ ವಿಜ್ಞಾನ, ತಂತ್ರಜ್ಞಾನದ ಕ್ರಾಂತಿಯಿಂದಾಗಿ ಕೈಗಾರೀಕರಣ ನಗರೀಕರಣ ಪ್ರಕ್ರಿಯೆಗಳು ಜನಜೀವನದಲ್ಲುಂಟು ಮಾಡಿದ ಬದಲಾವಣೆಗಳು ಅದರ ಭಾಗವಾದ ಕಲೆ ಸಾಹಿತ್ಯದಲ್ಲಿಯೂ ತಲೆದೋರಿದವು. ಅದರ ವಿಶಿಷ್ಟತೆಗಳನ್ನು ಮೈಗೂಡಿಸಿಕೊಂಡ ಮನಸ್ಥಿತಿಯೊಂದು ಮುನ್ನೆಲೆಗೆ ಬಂದಿತು. ಆಧುನಿಕತೆ ಎಂಬ ಪರಿಕಲ್ಪನೆ ಮುಖ್ಯವಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ಹೆಚ್ಚು ಪ್ರಚಲಿತತೆ ಪಡೆಯಿತು. ಅಭಿವೃದ್ಧಿ ಪ್ರಕ್ರಿಯೆಯಿಂದ ದೂರ ಉಳಿದಿದ್ದ ಒಂದು ರೀತಿಯ ನಿಶ್ಚಲತೆಯನ್ನು ಕಾಯ್ದುಕೊಂಡಿದ್ದ ಈ ರಾಷ್ಟ್ರಗಳು ಇಂಗ್ಲೆಂಡಿನ ವಸಾಹತುಶಾಹಿ ನೀತಿಗೊಳಪಟ್ಟು ಪಶ್ಚಿಮ ದೇಶಗಳ ಸಂಪರ್ಕದಿಂದ ಜಡತೆಯನ್ನು ಕಳೆದುಕೊಂಡು ಚಲನೆ ಪಡೆದವು. ಆದರೆ ಈ ಪ್ರಕ್ರಿಯೆ ಮುಂದುವರಿದು ಪಶ್ಚಿಮದ ಅನುಕರಣೆಯೆ ಆಧುನಿಕತೆಯಾದುದು ದುರಂತ.

ಈ ಅವಘಡವನ್ನು ಕಳೆಯಲು ಆಧುನಿಕೋತ್ತರ ಎಂಬ ವಾದ ಮುನ್ನೆಲೆ ಪಡೆಯಿತು. ಇದು ಆಧುನಿಕ ಎಂಬ ಪರಿಭಾಷೆ ಸೃಷ್ಟಿಸಿದ ನ್ಯೂನತೆಗಳಿಂದ ಮುಕ್ತಗೊಳ್ಳುವ ಮಾರ್ಗವಾಯಿತು. ಆಧುನಿಕೋತ್ತರ ಎಂಬುದು ಪೂರ್ವ ದೇಶಗಳೇ ಕಂಡುಕೊಂಡ ಮಾರ್ಗ. ಪಶ್ಚಿಮದ ಸೂರ್ಯನಿಂದ ಬಿಡುಗಡೆ ಪಡೆದು ತಮ್ಮ ಬೆಳಕಿನಲ್ಲಿಯೇ ತಾವು ನಡೆಯುವ ಹೋರಾಟವಿದು. ಪಶ್ಚಿಮ ದೇಶಗಳ ರೀತಿಗಳೆಲ್ಲ ಪೂರ್ವ ದೇಶಗಳಲ್ಲಿ

ಎಡೆಪಡೆಯುವುದೇ ಆಧುನಿಕತೆಯಾಗಿತ್ತು. ಇದೊಂದು ರೀತಿಯಲ್ಲಿ ಪಶ್ಚಿಮದ ಉದಾತ್ತೀಕರಣ ಪ್ರಕ್ರಿಯೆ. ಈ ಪ್ರಕ್ರಿಯೆಯಿಂದ ಪಶ್ಚಿಮ ಜಗತ್ತು ಮತ್ತಷ್ಟು ಭವ್ಯವಾಗಿ ಪ್ರತಿಬಿಂಬಿತವಾಯಿತು. ಇದರಿಂದ ಪೂರ್ವದೇಶಗಳು ಪಶ್ಚಿಮದ ಸರ್ವೆಂಟ್ಸ್‌ಗಳಂತಾಗಿ ಅಲ್ಲಿಯ ಪ್ರಚಾರ ರಾಯಭಾರಿಗಳಾದವು. ಮತ್ತೊಂದು ಹಂತದಲ್ಲಿ ಪೂರ್ವದೇಶಗಳ ಜ್ಞಾನಶಿಸ್ತುಗಳನ್ನೆಲ್ಲ ಶೋಧಿಸಿಕೊಂಡ ಪಶ್ಚಿಮ ಜಗತ್ತು ಅವುಗಳ ಮೇಲೆ ತನ್ನ ಮುದ್ರೆಯನ್ನೊತ್ತಿಕೊಂಡು ಕಾಲಮಾನದ ಅಂತರವಿಲ್ಲದೆ ತನ್ನ ಅಧಿಕೃತತೆಯನ್ನು ಸ್ಥಾಪಿಸಿತು. ಪೂರ್ವ ದೇಶಗಳ ಮೊದಲುಗಳು ಕಡೆಯಾಗಿ ಪಶ್ಚಿಮದೊಂದಿಗೆ ದ್ವಿತೀಯಗೊಂಡವು. ಉದಾಹರಣೆಗೆ ಸಮುದ್ರಗುಪ್ತನನ್ನು ಭಾರತದ ನೆಪೋಲಿಯನ್ ಎಂದೂ ವರ್ಣಿಸಿಕೊಳ್ಳುವಾಗ ಅವರಿಬ್ಬರು ಜೀವಿಸಿದ್ದ ಕಾಲದ ಅಂತರ ಮುಖ್ಯವಾಗಲಿಲ್ಲ. ಪಶ್ಚಿಮ ಮೊದಲಾಗಿ ಪೂರ್ವ ಕಡೆಯಾಗುವ ಪರಿಪಾಠ ಬೆಳೆಯಿತು. ಈ ತಪ್ಪುಗಳು ಎಲ್ಲಾ ಪೂರ್ವ ರಾಷ್ಟ್ರಗಳನ್ನು ಆವರಿಸಿವೆ. ಪಶ್ಚಿಮದಿಂದಲೇ ಅಧಿಕೃತಗೊಳ್ಳುವ ಧೋರಣೆ ಬಲವಾಗಿ ಪೂರ್ವ ರಾಷ್ಟ್ರಗಳ ಮೂಲ ಪ್ರವೃತ್ತಿಗಳೇ ವಿಸ್ಮೃತಿಗೊಳಗಾಗಿ ಅವುಗಳನ್ನು ಶೋಧಿಸಿಕೊಳ್ಳುವ ನೆಲೆಯಲ್ಲಿಯೂ ಆಧುನಿಕೋತ್ತರವಾದ ಎನ್ನುವ ಪರಿಭಾಷೆ ಉದ್ಭವಿಸಿತು. ಇದು ಪಶ್ಚಿಮದ ಶ್ರೇಷ್ಠತೆಯ ವ್ಯಸನದಿಂದ ಬಿಡುಗಡೆಯ ಸ್ಥಿತಿಯು ಆಯಿತು. ಸೈದ್ ರೂಪಿಸಿದ ಪೌರಾತ್ಯವಾದ ಈ ನೆಲೆಯಲ್ಲಿ ಮುಖ್ಯ.

ಆಧುನಿಕೋತ್ತರವಾದವನ್ನು ವಸಾಹತೋತ್ತರವಾದ ಎಂತಲೂ ಕರೆಯಲಾಗಿದೆ. ಕನ್ನಡ ಸಾಹಿತ್ಯದ ದಿಕ್ಕನ್ನು ಬದಲಾಯಿಸಿದ ಎರಡು ಕಾಲಘಟ್ಟಗಳು ಇಂತಹ ವಸಾಹತೀಕರಣದಿಂದಲೇ ರೂಪುಗೊಂಡವು. ಒಂದು ಸಂಸ್ಕೃತ ಭಾಷೆ ಸಾಹಿತ್ಯದ ದೆಸೆಯಿಂದ ಆದದು. ಮತ್ತೊಂದು ಬ್ರಿಟೀಷ್ ವಸಾಹತುಶಾಹಿ ಸಾಹಿತ್ಯದಿಂದಾದುದು. ಒಂದೆಡೆ ಶ್ರೀವಿಜಯ ಮತ್ತೊಂದೆಡೆ ಬಿ.ಎಂ.ಶ್ರೀ ಈ ಎರಡು ಘಟ್ಟಗಳ ಪ್ರವರ್ತಕರು. ಕವಿರಾಜಮಾರ್ಗ ಕನ್ನಡದ ಮೊದಲ ಲಭ್ಯ ಕೃತಿಯೋ, ಕನ್ನಡ ಸಾಹಿತ್ಯದ ದಿಕ್ಕನ್ನು ಬದಲಿಸಿ ಹೊಸ ಘಟ್ಟವನ್ನು ಸೃಷ್ಟಿಸಿದ ಕೃತಿಯೋ ಚರ್ಚಿಸಬೇಕು. ತನ್ನ ಹಿಂದಿನ ಪೂರ್ವಾಚಾರ್ಯರ ಉಲ್ಲೇಖವಿತ್ತು ನುಡಿವ ಮಾರ್ಗಕಾರ ಹೊಸ ಪರಂಪರೆಯ ಸೃಷ್ಟಿಗೆ ನಿರ್ದಿಷ್ಟ ಮೀಮಾಂಸೆಯನ್ನು ತನ್ನ ಕಾವ್ಯದ ಮೂಲಕ ಸೃಷ್ಟಿಸಿದ. ಹಾಗಾಗಿ ಕವಿರಾಜಮಾರ್ಗ ಕನ್ನಡ ಕವಿಗಳಿಗೆ ರಾಜಮಾರ್ಗ ನಿರ್ಮಿಸಿದ ಕೃತಿ. ಅದು ಹೊಸ ಮಾರ್ಗವೋ ಸಂಸ್ಕೃತ ಗಂಧವನ್ನು ಕನ್ನಡದಲ್ಲಿ ಪಸರಿಸಲು ಯತ್ನಿಸಿದ ಪರಿಷ್ಕೃತ ಮಾರ್ಗವೋ ತಿಳಿಯದು. ಜನಪದ ಸಾಹಿತ್ಯ ಇಂದಿಗೂ ಸಾಹಿತ್ಯ ಚರಿತ್ರೆಗಳ ವ್ಯಾಪ್ತಿಗೆ ಬಂದಿಲ್ಲವಾದರಿಂದ ಅದರ ಕಾಲ ವ್ಯಾಪ್ತಿ ತಿಳಿಯದು. ಕವಿರಾಜಮಾರ್ಗಕ್ಕಿಂತ ಪೂರ್ವದ ಸಾಹಿತ್ಯ ಲಭ್ಯವಿಲ್ಲದುದರಿಂದ ಆ ಹಿಂದಿನ ಕನ್ನಡ ಸಾಹಿತ್ಯದ ಸ್ಥಿತಿಯು ತಿಳಿಯದು. ಸಂಸ್ಕೃತ ಅಂದಿಗೆ ದೇವಭಾಷೆ. ಅದರ ವ್ಯಾಪ್ತಿ ಕಿರಿದಾದರೂ ಜಾಗತಿಕವಲ್ಲದಿದ್ದರೂ ಆ ಹೊತ್ತಿನ ಮಿತಿಗಳನ್ನು ಲಕ್ಷಿಸಿದರೆ ಅದು ಅಂದಿನ ಮಿತಿಯಲ್ಲಿ ವಿಶ್ವಮಾನ್ಯಭಾಷೆ. ಕಾರಣ ವೇದಗಳನ್ನು ಜಗತ್ತಿನ ಪ್ರಾಚೀನ ಸಾಹಿತ್ಯವೆಂದು ಕರೆಯಲಾಗಿದೆ. 9ನೇ ಶತಮಾನದ ಹೊತ್ತಿಗೆ ಭಾರತದ ರಾಜಭಾಷೆಯಾಗಿ ಮೆರೆದದ್ದು ಸಂಸ್ಕೃತ. ಪ್ರಭುತ್ವಗಳೆಲ್ಲವೂ ಈ ದೇವಭಾಷೆಯ ಹಂಗಿಗೆ ಹಾತೊರೆಯುತ್ತಿದ್ದ ಕಾಲ. ಕನ್ನಡ ಸಾಹಿತ್ಯೇತಿಹಾಸ ಆರಂಭವಾಗುವ ಹೊತ್ತಿಗೆ ಸಂಸ್ಕೃತ ಸಮೃದ್ಧ ಸಾಹಿತ್ಯ ಭಂಡಾರವುಳ್ಳ ಭಾಷೆಯಾಗಿತ್ತು. ಭಾರತದ ಸ್ಥಳೀಯ ಭಾಷೆಗಳೆಲ್ಲ ಅದರ ಅನುಕರಣಾ ಶ್ರೇಷ್ಠತೆಯಲ್ಲಿ ಮುಳುಗಿದ್ದವು.

ರಾಜಕೀಯವಾಗಿ ಕನ್ನಡ ಅರಸು ಮನೆತನಗಳು ಇದಕ್ಕೆ ಹೊರತಾಗಿರಲಿಲ್ಲ, ಸಂಸ್ಕೃತ ಬಳಕೆಯ ಮೂಲಕ ಉನ್ನತೀಕರಣಗೊಳ್ಳಲು, ಮತ್ತೊಂದೆಡೆ ಆ ಮೂಲಕ ವೈದಿಕ ಪ್ರಭುತ್ವ

ಸ್ಥಾಪನೆಗೊಳ್ಳಲು ಯತ್ನಿಸಿದ್ದವು. ಪ್ರಭುತ್ವಗಳ ಈ ಮಾದರಿಗೆ ಅಂದಿನ ಬುದ್ಧಿಜೀವಿಗಳು ಜನಸಾಮಾನ್ಯರು ಒಗ್ಗಿಕೊಳ್ಳಬೇಕಿತ್ತು. ಸಂಸ್ಕೃತ ಬಲ್ಲ ಪಡೆಯೊಂದು ಕನ್ನಡ ನಾಡಿನಲ್ಲಿ ಎಡೆ ಪಡೆದು ಪ್ರಭುತ್ವ ರಾಜಕಾರಣಕ್ಕೆ ಸಹಕರಿಸಬೇಕಿತ್ತು. ಅದರ ಪ್ರಭಾವ ಕಲೆ ಸಾಹಿತ್ಯವನ್ನು ಆವರಿಸಿ ಅದರ ನಿರ್ದಿಷ್ಟ ತಂತ್ರಗಳನ್ನು ಸಾಹಿತ್ಯ ರಚನೆಯಲ್ಲಿ ಅಳವಡಿಸುವ ಆ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸ ಸ್ಪರ್ಶ ನೀಡುವ ಕಾರ್ಯವನ್ನು ಕವಿರಾಜ ಮಾರ್ಗ ಮಾಡಿರಬೇಕು. ಮುಂದೆ ಬೆಳೆದು ಬಂದ ಸಂಸ್ಕೃತ ಸಾಹಿತ್ಯದ ಪ್ರಭಾವದಿಂದ ಕನ್ನಡದ ಹಳೆ ಸಾಹಿತ್ಯ ಕಣ್ಮರೆಯಾಗುತ್ತ ಸಾಗಿರಬೇಕು ಅಥವಾ ವಿನಾಶದ ಅಂಚನ್ನು ತಲುಪಿರಬೇಕು. ಕನ್ನಡ ದೇಸಿ ಸಂಸ್ಕೃತ ಮಾರ್ಗ ಮಿಶ್ರಿತ ನವಮಾರ್ಗವನ್ನು ಮಾರ್ಗಕಾರ ರೂಪಿಸಿ ಪ್ರಚುರ ಪಡಿಸಿರಬೇಕು. ಅಥವಾ ಆಗಲೇ ಕನ್ನಡದಲ್ಲಿ ಆ ಮಾರ್ಗ ಪ್ರಚಲಿತಗೊಂಡು ಅದರ ನಿಯಮಾವಳಿಗಳನ್ನು ಮಾರ್ಗಕಾರ ಹೇಳುತ್ತಿರಬೇಕು.

ಇಡೀ ಕನ್ನಡ ನಾಡು ಸಂಸ್ಕೃತ ಲಯವನ್ನು ಹೊಂದಲು ಯತ್ನಿಸುತ್ತಿರುವಾಗ

**"ಅದರೊಳಗಂ ಕಿಸುವೊಳಲಾ**
**ವಿದಿತ ಮಹಾ ಕೊಪಣ ನಗರದಾ ಪುಲಿಗೆರೆಯಾ**
**ಸದಭಿಸ್ತುತಮಪ್ಪೊಕ್ಕುಂ**
**ಅದರ ನಡುವಣ ನಾಡೆ ನಾಡೆ ಕನ್ನಡದ ತಿರುಳ್"**

ಎಂದು ಮಾರ್ಗಕಾರ ಉಲ್ಲೇಖಿಸುವ ತಿರುಳ್ಗನ್ನಡ ಸೀಮೆಗಳು ಕನ್ನಡ ದೇಸಿಯನ್ನು ಕಾಯ್ದುಕೊಳ್ಳಲು ಹೆಣಗಿರಬೇಕು. ಈ ಉಲ್ಲೇಖವು ಅಂದು ಕನ್ನಡ ನಾಡಿನಲ್ಲಿದ್ದ ಸಂಸ್ಕೃತ ಪ್ರಭಾವವನ್ನು ಅರಿಯಲು ಸಹಾಯಕವಾಗಿವೆ. ದೇಸಿ ಸಂಘರ್ಷಿಸುತ್ತಿದ್ದದ್ದು ಕೇವಲ ಸಂಸ್ಕೃತದೊಂದಿಗೋ? ಇನ್ನು ಅನ್ಯ ಪ್ರಭಾವಳಿಗಳಿದ್ದವೋ? ತಿಳಿಯಬೇಕು. ಇಂದಿಗೂ ಕರ್ನಾಟಕದಲ್ಲಿ ಅಚ್ಚಗನ್ನಡ ಪ್ರದೇಶಗಳೆಂದು ಗುರುತಿಸಲಾಗುವ ಈ ಜಿಲ್ಲೆಗಳು ಸಮೃದ್ಧ ಜನಪದ ಸಾಹಿತ್ಯ ಕಲೆಯನ್ನು ಉಳಿಸಿಕೊಂಡಿರುವ ಜಿಲ್ಲೆಗಳಾಗಿವೆ. ಇದು ಆ ಮಣ್ಣಿನ ಚಾರಿತ್ರಿಕ ಗುಣವಿರಬೇಕು. ಈ ಎಲ್ಲವನ್ನು ಗಮನಿಸಿದಾಗ ಮಾರ್ಗಕಾರ ಕನ್ನಡ ಸಾಹಿತ್ಯಕ್ಕೆ ಹೊಸ ಮಾರ್ಗವನ್ನು ಪರಿಚಯಿಸಿದ ಮೊದಲಿಗನಾಗುತ್ತಾನೆ.

ಎರಡನೇ ಘಟ್ಟದಲ್ಲಿ ಇಂಗ್ಲೀಷ್ ಗೀತೆಗಳ ಮೂಲಕ ಬಿ.ಎಂ.ಶ್ರೀ ಮಾಡಿದ ಪ್ರಯತ್ನ. ಹಳೆಯ ಸಾಹಿತ್ಯ ಹೊಸ ಸಾಹಿತ್ಯವನ್ನು ಅರಿತು ನಡೆಯಬೇಕು. ಆ ಎರಡರ ಸಮ್ಮಿಲನವಾಗಬೇಕು. ಆ ಮೂಲಕ ನಿಶ್ಚಲಗೊಳ್ಳುತ್ತಿರುವ ಕನ್ನಡ ಸಾಹಿತ್ಯ ಮರುಜೀವ ಪಡೆಯಬೇಕು ಎಂದು ಆಶಿಸಿದರು. 19ನೇ ಶತಮಾನದ ಹೊತ್ತಿಗೆ ಮೌನಗೊಳ್ಳುವ ಸಾಹಿತ್ಯ ಚರಿತ್ರೆಗಳ ಸ್ಥಿತಿಯು ಇದನ್ನೇ ನುಡಿಯುತ್ತದೆ. ಆ ಹೊತ್ತಿಗೆ ಕನ್ನಡ ಶಿಷ್ಟ ಸಾಹಿತ್ಯ ತನ್ನ ಸತ್ವ ಕಳೆದು ನಿಸ್ತೇಜಗೊಳ್ಳಲಾರಂಭಿಸಿತ್ತು. ಪಂಪನಿಂದ ಆರಂಭವಾಗುವ ಸಾಹಿತ್ಯ ಚರಿತ್ರೆಗಳು 17ನೇ ಶತಮಾನದ ಹೊತ್ತಿಗೆ ಒಂದೋ ಎರಡೋ ಮಹತ್ವದ ಕೃತಿಗಳ ಮಂದ ಬೆಳಕಿನಲ್ಲಿ ನಡೆಯುತ್ತಾ ಕೊನೆಗೆ ಅದು ಕಣ್ಮರೆಯಾಗಿ ಕತ್ತಲ ಹಾದಿ ಹಿಡಿದಿವೆ.

ಈ ಹೊತ್ತಿಗೆ ತತ್ವಪದ ಸಾಹಿತ್ಯ ವ್ಯಾಪಕ ಪ್ರಚಾರದಲ್ಲಿದ್ದರೂ ವಚನ, ದಾಸ, ತತ್ವಪದ ಸಾಹಿತ್ಯವನ್ನು ಅಕಾಡೆಮಿಕ್ ವ್ಯಾಪ್ತಿಗೆ ತರುವಲ್ಲಿ ಸಂದೇಹಗಳೇರ್ಪಟ್ಟು ಅವು ಜನ ಸಾಹಿತ್ಯವಾಗಿಯೇ ಮುಂದುವರೆದಿವೆ. ಅವುಗಳ ವ್ಯಾಪ್ತಿ ಹಿರಿದಾದುದರಿಂದ ಆ ಕುರಿತು ಆರಂಭಿಕ ಸಾಹಿತ್ಯ ಚರಿತ್ರೆಗಳು ಮಾತನಾಡಿಲ್ಲ. ಫ.ಗು ಹಳಕಟ್ಟಿ, ಚನ್ನಪ್ಪ ಉತ್ತಂಗಿ ಮೊದಲಾದವರಿಂದ ವಚನ ಸಾಹಿತ್ಯ ಶೋಧಿಸಲ್ಪಟ್ಟು ಪ್ರಚಾರಗೊಂಡು ಸಾಹಿತ್ಯ ಚರಿತ್ರೆಗಳನ್ನು ಸೇರುವ ಒತ್ತಡವನ್ನು ಸೃಷ್ಟಿಸಿಕೊಂಡಿತು. ಅದರ ಬೆನ್ನಲ್ಲೆ ದಾಸ ಸಾಹಿತ್ಯವೂ. ಈ ಎರಡಕ್ಕೂ

ಬೆನ್ನೆಲುಬಾದ ಧಾರ್ಮಿಕ ಅಭಿಲಾಷೆಯನ್ನು ಗಮನಿಸಿದಾಗ ನಿರ್ದಿಷ್ಟ ಪಂಗಡಕ್ಕೊಲಿಯದ ತತ್ವಪದ ಸಾಹಿತ್ಯ ತನ್ನ ಬಹುಸಾಂಸ್ಕೃತಿಕ ನಿಲುವಿನಿಂದ ಈ ಪೈಪೋಟಿಯಲ್ಲಿ ಹಿಂದುಳಿಯಿತು.

ಅನುಭಾವ ಸಾಹಿತ್ಯದ ಚರ್ಚೆಯನ್ನು ಹೊರಗಿಟ್ಟು ಈ ಹೊತ್ತಿಗೆ ಪ್ರಚಲಿತವಿದ್ದ ಶಿಷ್ಟ ಸಾಹಿತ್ಯದ ಚರ್ಚೆಯನ್ನು ಮುಂದುವರೆಸಿದರೆ, 18ನೇ ಶತಮಾನದ ಹೊತ್ತಿಗೆ ಕನ್ನಡ ಶಿಷ್ಟ ಸಾಹಿತ್ಯದ ಬೆಳೆ ಕುಂಠಿತಗೊಳ್ಳಲು ಅಂದಿನ ಪರಿಸರವು ಕಾರಣವಾಗಿತ್ತು. ಸಂಸ್ಕೃತ, ಕನ್ನಡ, ಇಂಗ್ಲೀಷ್ ಈ ಮುಪ್ಪುರಿಗೊಂಡ ಮಾದರಿಯಲ್ಲಿ ಯಾವುದನ್ನು ಅನುಸರಿಸಲು ತೋಚದ ಗೊಂದಲ ಸ್ಥಿತಿ ಏರ್ಪಟ್ಟಿತು. ವಸಾಹತುಶಾಹಿ ವ್ಯವಸ್ಥೆಯ ಶಿಕ್ಷಕ ವೃತ್ತಿಯಲ್ಲಿದ್ದ ಮುದ್ದಣ “ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು” ಎಂದು ಸಂಸ್ಕೃತ ವಸಾಹತುಶಾಹಿಯನ್ನು ವಿರೋಧಿಸಿದ್ದು, ಅದೇ ಅಧ್ಯಾಪನ ವೃತ್ತಿಯಲ್ಲಿದ್ದ ಶರೀಫರು ಬ್ರಿಟೀಷ್ ವಸಾಹತುಶಾಹಿಯನ್ನು ವಿರೋಧಿಸುತ್ತಿದ್ದದ್ದು ಅಂದಿನ ಕನ್ನಡ ನಾಡಿನ ತ್ರಿಭಾಷಾ ಸ್ಥಿತಿಗೆ ಹಿಡಿದ ಕನ್ನಡಿ. ಕ್ರಮೇಣ ಬ್ರಿಟೀಷ್ ವಸಾಹತುಶಾಹಿಯೆದುರು ಸಂಸ್ಕೃತ ತ್ರಾಣವಿಲ್ಲದೆ ಸೋತಿತು. ಮುಂದೆ ಕನ್ನಡ ಸಾಹಿತ್ಯಕ್ಕೆ ಇಂಗ್ಲೀಷ್ ಸಾಹಿತ್ಯವೇ ಪ್ರೇರಕ ಪೋಷಕ ಗುರುವಾಗಿ ನಡೆಯಿತು. ಆದರೆ ಸಂಸ್ಕೃತದಷ್ಟು ದೀರ್ಘಜೀವನವನ್ನು ಇಂಗ್ಲೀಷ್ ಸಾಹಿತ್ಯ ಕಂಡುಕೊಳ್ಳುವುದೋ ಕಾಯ್ದು ನೋಡಬೇಕಿದೆ. ಆಧುನಿಕ ಎಂಬ ಪರಿಕಲ್ಪನೆಯಡಿಯಲ್ಲಿ ಇಂಗ್ಲೀಷ್ ಸಾಹಿತ್ಯ ಪಡೆದ ವೇಗವನ್ನು ಆಧುನಿಕೋತ್ತರ ಎಂಬ ಕಲ್ಪನೆ ಇಲ್ಲವಾಗಿಸಲೆತ್ನಿಸುತ್ತಿದೆ.

ಕನ್ನಡ ಸಾಹಿತ್ಯದಲ್ಲಿ ಎಲ್ಲಾ ಕಾಲಕ್ಕೂ ಇದ್ದ ಸ್ಥಿತಿಯಿದು. ಅಂದು ಸಂಸ್ಕೃತವನ್ನು ಪ್ರಚುರಪಡಿಸುವ ಇಂದು ಇಂಗ್ಲೀಷನ್ನು ಪ್ರಚುರಪಡಿಸುವ ಮಾನದಂಡಗಳು ಸಮನಾಂತರವಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯ ಕಾಲಕ್ಕೆ ಶಿಷ್ಟ ಕವಿಗಳಿಂದ ರಚನೆಯಾದ ಕೃತಿಗಳನ್ನೋದಿಕೊಂಡು ಪ್ರಚಾರಪಡಿಸುವ ಗಮಕಿಗಳಿದ್ದರು, ಸಂಸ್ಕೃತ ಭಾಷೆಯನು ಧರ್ಮವಾಗಿಸುವ ಪುರೋಹಿತರು, ರಾಜಕೀಯ ಮಾನ್ಯತೆ ದೊರಕಿಸುವ ಪ್ರಭುತ್ವಗಳು, ಸಾಂಸ್ಕೃತಿಕ ಬದುಕಿನ ಭಾಗವಾಗಿಸುವ ಆಚರಣೆಗಳು ರೂಢಿಗತಗೊಂಡವು. ಇಂದು ಇಂಗ್ಲೀಷ್ ಭಾಷೆಯನ್ನು ಪ್ರಚುರಪಡಿಸುವ ಪ್ರಭುತ್ವ ನೀತಿಗಳು, ಧರ್ಮವಾಗಿಸುವ ವಿಜ್ಞಾನ, ಆಚರಣೆಯಾಗಿಸುವ ತಂತ್ರಜ್ಞಾನ ಇವೇ ಮೊದಲಾದ ನಿಗದಿತ ಉಪಕರಣಗಳು ಚಾಲ್ತಿಯಲ್ಲಿವೆ. ಪ್ರಾಚೀನ ಕೃತಿಗಳೆಲ್ಲವು ಧರ್ಮ ಪ್ರಚಾರಕ ಉದ್ದೇಶದಿಂದಲೇ ರೂಪುಗೊಂಡರೆ, ಆಧುನಿಕ ಕೃತಿಗಳೆಲ್ಲ ವಿಜ್ಞಾನದ ಆವಿಷ್ಕಾರಗಳಾಗುವುದು ತಡವಿಲ್ಲ. ದೇವರು ಧರ್ಮವನ್ನು ನಿಂದಿಸುತ್ತ ಸ್ಪರ್ಧೆಗಿಳಿದ ವಿಜ್ಞಾನ ಮತ್ತು ತಂತ್ರಜ್ಞಾನ ಅದರ ಹೊಸ ಮಾದರಿಯೇ ಹೊರತು ಅನ್ಯವೆನಿಸುತ್ತಿಲ್ಲ. ಜನ ಬದುಕಿನಲ್ಲಿ ಶೋಷಣೆಯನ್ನು ಹುಟ್ಟು ಹಾಕಿದ್ದು ದೇವರು, ಧರ್ಮದ ಸಾಧನೆಯಾದರೆ, ಜನಬದುಕನ್ನೇ ಇಲ್ಲವಾಗಿಸುವುದು ವಿಜ್ಞಾನ ಮತ್ತು ತಂತ್ರಜ್ಞಾನದ ಶ್ಲಾಘನೆ. ಯಂತ್ರಗಳ ಹಿರಿಮೆಯಲ್ಲಿ ಕನಿಷ್ಠ ಅನುಭವಗಳಿಂದಲೂ ದೂರಾಗುತ್ತಿರುವ ನವಮಾನವ ತನ್ನ ಮುಂದಿನ ಸ್ಥಿತಿಯನ್ನು ಕಾದು ನೋಡಬೇಕು.

ಈ ಚರ್ಚೆಯನ್ನು ಬೆಳೆಸದೆ ಆಧುನಿಕೋತ್ತರ ಎಂಬ ಪರಿಕಲ್ಪನೆಯನ್ನು ಅವಲೋಕಿಸಿದರೆ 'ಆಧುನಿಕೋತ್ತರ' ಎಂಬ ಪರಿಕಲ್ಪನೆಯು ಒಂದು ಸಿದ್ಧಾಂತವಾಗಿ ರೂಢಿಗೆ ಬಂದಿತು. ಕಲೆ, ಸಾಹಿತ್ಯ, ಚರಿತ್ರೆ ಇತ್ಯಾದಿ ಎಲ್ಲ ಶಿಸ್ತುಗಳು ಇದರಿಂದ ನವ ಚೈತನ್ಯ ಪಡೆದಿವೆ. ಈ ಪದವನ್ನು ಮೊದಲ ಬಾರಿಗೆ ಬಳಕೆಗೆ ತಂದವನು 'ಹಸನ್ ಈಸಬ್'. 80ರ ದಶಕದ ನಂತರ ವ್ಯಾಪಕತೆ ಪಡೆದ ಪರಿಕಲ್ಪನೆಯಿದು. ಆ ದಶಕದ ಸಬಾಲ್ಟರ್ನ್ ಚಿಂತಕರನ್ನೆಲ್ಲ ಆತ ಈ ಆಧುನಿಕೋತ್ತರ ಪರಿಕಲ್ಪನೆಯ ವ್ಯಾಪ್ತಿಗೆ ತಂದನು. ಹಸನ್ ನ ಆಧುನಿಕೋತ್ತರವಾದವನ್ನು ಸಂದೇಹವಾದ, ಸಂಶಯವಾದ, ವಿರೋಧವಾದ ಎಂತಲೂ ಕರೆಯಲಾಗಿದೆ. ಏಕೆಂದರೆ

ಹಸನ್ ನ ಪ್ರಕಾರ ಈವರೆಗೂ ಅಂದರೆ ಆಧುನಿಕೋತ್ತರ ಪರಿಕಲ್ಪನೆ ಸೃಷ್ಟಿಯ ಘಟ್ಟದವರೆಗೂ ಬೆಳೆದು ಬಂದ ಸಾಹಿತ್ಯವೆಲ್ಲ ಪುನರ್ವಿಮರ್ಶೆಯಾಗಬೇಕಿದೆ. ಅಥವಾ ಈ ಕುರಿತು ಸಂಶಯಿಸಬೇಕಿದೆ. ಈ ಸಂದೇಹ ಎಲ್ಲಾ ಕ್ಷೇತ್ರಗಳನ್ನು ಆವರಿಸಬೇಕಿದೆ. ಅದು ವಿರೋಧ ನೆಲೆಯಲ್ಲಿಯೂ ವ್ಯಕ್ತವಾಗಿದೆ. ಈ ದಿಸೆಯಲ್ಲಿ ಹಸನ್ ಇಸಬ್ ಆ ಪೂರ್ವದ ಸಂಸ್ಕೃತಿ ಚಿಂತಕರ ವಾದಗಳನ್ನೆಲ್ಲ ತಿರಸ್ಕರಿಸುತ್ತಾನೆ.

ಹಾಗಾದರೆ ಆಧುನಿಕೋತ್ತರದ ನಿಲುವೇನು? ಎಂಬುದಕ್ಕೆ ಆತ ಕಂಡುಕೊಂಡಿರುವ ಉತ್ತರವೆಂದರೆ, "ಕ್ರಮದ ಬದಲಿಗೆ ಗೊಂದಲ, ನಿಶ್ಚಿತ ಏಕಾರ್ಥದ ಬದಲು ಅರ್ಥ–ಅನಿಶ್ಚಯತೆ, ಕೇಂದ್ರಾಡಳಿತ ವ್ಯವಸ್ಥೆಗೆ ಬದಲಾಗಿ ವಿಕೇಂದ್ರೀಕೃತ ಒಡಂಬಡಿಕೆ, ಏಕಮತದ ಬದಲಿಗೆ ಭಿನ್ನಮತಕ್ಕೆ ಮಾನ್ಯತೆ, ಸಮಾನತೆಗೆ ಬದಲು ವೈವಿಧ್ಯತೆ, ನಂಬಿಕೆಯ ಜಾಗದಲ್ಲಿ ಸಂದೇಹ" ಇತ್ಯಾದಿ ಆಧುನಿಕೋತ್ತರವಾದದ ವೈಶಿಷ್ಟ್ಯ. ಹಸನ್ ಈಸಬ್ ನ ಈ ಒಟ್ಟು ಧೋರಣೆಯನ್ನು ಆಧುನಿಕೋತ್ತರ ಎನ್ನುವ ಸಮಕಾಲೀನ ಸಾಹಿತ್ಯ ವ್ಯಕ್ತಪಡಿಸುತ್ತಿದೆ.

ಇಂದು ಸಾಹಿತ್ಯದಲ್ಲಿ ಯಾವುದೇ ಒಂದೇ ಸಿದ್ಧಾಂತವಿಲ್ಲ. ಹಲವು ವಾದಗಳು ಎಡೆಪಡೆದಿವೆ. ನಿರ್ದಿಷ್ಟ ಪ್ರಕಾರ, ಪಂಥ, ಘಟ್ಟ, ಪ್ರಾತಿನಿಧಿಕ ಲೇಖಕರು ಇತ್ಯಾದಿ ಕಾಲಮಾನದ ಅಂತೇನೂ ಅನಿಸುವ ಯಾವುದೇ ಮಾನದಂಡವಿಲ್ಲ. ಬಹುತೇಕರು ಬರೆಯುತ್ತಿದ್ದಾರೆ. ಅವರವರ ಆಲೋಚನೆಗಳನ್ನು ಮಂಡಿಸುತ್ತಿದ್ದಾರೆ. ಅದನ್ನು ಮತ್ತಾರೋ ಒಪ್ಪುತ್ತಿದ್ದಾರೋ ಪಾಲಿಸುತ್ತಿದ್ದರೋ ಮುಖ್ಯವಲ್ಲ. ಎಲ್ಲ ತರಹದ ಬದುಕಿನ ಚಿತ್ರಣ ತೆರೆದುಕೊಳ್ಳುತ್ತಿದೆ. ಒಟ್ಟಾರೆಯಾಗಿ ಯಾವೊಂದು ಪಂಥವು ಮುನ್ನೆಲೆಯಲ್ಲಿಲ್ಲ. 1975ರ ನಂತರ ಕನ್ನಡ ಸಾಹಿತ್ಯದಲ್ಲಿ ಮುನ್ನೆಲೆಗೆ ಬಂದ ದಲಿತ ಬಂಡಾಯ ಘಟ್ಟವು ತೀರಿ ಹೋಗಿ ಮತ್ತಾವುದೋ ಹೊಸ ಯುಗ ಎಡೆಪಡೆದಿದೆ. ಅದನ್ನು ವ್ಯಾಖ್ಯಾನಿಸುವ ಗೊಡವೆಯು ಯಾರಿಗೂ ಬೇಡ. ಅನುಸರಣೆ ನಿಂತು ಹೋಗಿ ಹಲವು ತೋಟದ ಹೂಗಳಂತೆ ಅನೇಕರು ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಭಾಷೆಯ ವಿಚಾರದಲ್ಲೂ ಇದೇ ಧೋರಣೆ. ಪ್ರಮಾಣವೆನಿಸಿದ ಕನ್ನಡವೊಂದರ ಮಾನ್ಯತೆ ಇಲ್ಲವಾಗಿ ಹಲವು ಕನ್ನಡಗಳಲ್ಲಿ ಸಾಹಿತ್ಯ ರಚನೆಯಾಗುತ್ತಿದೆ. ಈ ಸ್ಥಿತಿ ಎಲ್ಲಾ ಸಾಹಿತ್ಯಿಕ ಕಾಲಘಟ್ಟಗಳ ಅರುಣೋದಯದಲ್ಲಿ ಉಂಟಾಗುತ್ತಿದ್ದ ಸ್ಥಿತಿಯೋ ಅಥವಾ ಪ್ರಚಲಿತ ವರ್ತಮಾನದ ಸ್ಥಿತಿಯೋ?

18ನೇ ಶತಮಾನದ ಹೊತ್ತಿಗೆ ಕನ್ನಡ ಸಾಹಿತ್ಯ ಬಹುತೇಕ ನಿಶ್ಚಲ ಸ್ಥಿತಿ ತಲುಪಿದ್ದಾಗ ತತ್ವಪದಕಾರರು ಕರ್ನಾಟಕದಾದ್ಯಂತ ಇಂತದೇ ಸ್ಥಿತಿ ಸೃಷ್ಟಿಸಿ ಕನ್ನಡ ಜನಜೀವನಕ್ಕೇ ಈ ಬಹುತ್ವ ಮಾದರಿಯನ್ನು ಪರಿಚಯಿಸಿದ್ದರು. ಅನಂತರ ಆಧುನಿಕ ಸಾಹಿತ್ಯ ಬೆಳೆದು ಬಂದು ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಎಂಬ ಪಾಂಥಿಕ ಪ್ರತಿನಿಧೀಕರಣಕ್ಕೆ ಒಳಗಾಯಿತು. ಅಲ್ಲಿಂದ ನೂರು ವರ್ಷಕ್ಕೆ ಅಂದರೆ, ಈಗ ಸಾಹಿತ್ಯದಲ್ಲಿ ಪಂಥಗಳೆಲ್ಲ ಒಡೆದು ಸ್ವಾಯತ್ತತೆ ಮುನ್ನೆಲೆ ಪಡೆಯುತ್ತಿದೆ. 1975ರ ಹೊತ್ತಿಗೆ ಭಾರತದಲ್ಲಿ ಲೋಹಿಯವಾದ ಬಿಟ್ಟು ಮತ್ತಾವು ಜೀವಂತವಿದ್ದಂತೆ ತೋರುತ್ತಿರಲಿಲ್ಲ ಎಂಬ ಮಾತು ಇಲ್ಲಿ ಪ್ರಸ್ತುತವೆನಿಸುತ್ತದೆ.4 ಕಾರಣ ಈಗಲೂ ಅದೇ ಸ್ಥಿತಿ ಕನ್ನಡ ಸಾಹಿತ್ಯದಲ್ಲಿದೆ. ಈ ದೇಶದ ಬಹುಸಂಖ್ಯಾತ ಶೋಷಿತ ಸಮುದಾಯಗಳ ದನಿಗೂಡಿ ಅಂಬೇಡ್ಕರ್ ವಾದ ವ್ಯಾಪಕತೆ ಪಡೆದಂತೆ ಕೇಳಿಸುತ್ತಿದೆಯಾದರೂ ಎಲ್ಲಾ ವಾದಗಳು ಇಲ್ಲವಾಗಿವೆ. ಅಥವಾ ಎಲ್ಲಾ ವಾದಗಳು ಪ್ರಸಾರ ಪಡೆದಿವೆ ಎನ್ನುವ ಸ್ಥಿತಿಯಿದೆ. ಆದರೆ ಏಕತೆಗೆ ಅವಕಾಶವಿಲ್ಲ.

ಕವಿರಾಜಮಾರ್ಗಕಾರ, ಬಿ.ಎಂ.ಶ್ರೀಯವರ ನಂತರ ಮತ್ತೊಂದು ಅನುವಾದಯುಗ

ಆರಂಭವಾಗಿದೆ. ಮೊದಲನೆಯದಕ್ಕಿಂತ ಎರಡನೆಯ ಅನುವಾದಯುಗ ಹಿರಿಯ ವ್ಯಾಪ್ತಿ ಪಡೆದಿತ್ತು. ಈಗ ಮೂರನೆಯ ಅನುವಾದಯುಗ ಎರಡನೆಯದಕ್ಕಿಂತ ವಿಸ್ತೃತವಾಗಿದೆ. ಇದು ಜಾಗತಿಕ ಸಾಹಿತ್ಯ ಎಂಬ ಹಣೆಪಟ್ಟಿಯೊಂದಿಗೆ ಕನ್ನಡ ಜಗತ್ತನ್ನು ಸೇರುತ್ತಿದೆ. ಇದು ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯದ ಮಟ್ಟಿಗೆ ಸಂಕ್ರಮಣ ಕಾಲ. ರಾಜಮಾರ್ಗ ಒಡೆದು ಕಾಲುದಾರಿಗಳು ಏರ್ಪಟ್ಟಿವೆ. ಈ ಕಾಲುದಾರಿಗಳೇ ಮುಂದೆ ಹೆದ್ದಾರಿಗಳಾಗಲು ಹಾತೊರೆಯುತ್ತವೆಯೋ ಕಾದು ನೋಡಬೇಕಿದೆ. ಉದಾಹರಣೆಗೆ ಪುರುಷಾರೋಪ, ಪುರುಷ ಪ್ರಾಧಾನ್ಯತೆಯನ್ನು ಖಂಡಿಸುತ್ತ ಅದರೊಂದಿಗೆ ಸಮಾನತೆ ಸ್ಥಾಪಿಸಲು ಪ್ರಯತ್ನಿಸುತ್ತಿದ್ದ ಮಹಿಳಾ ಸಾಹಿತ್ಯ ಈಗ "ನಿಮ್ಮ ಚರಿತ್ರೆಯಲ್ಲಿ ನಾವು ಬರುವುದಿಲ್ಲ" ಎನ್ನುತ್ತ ಪ್ರತ್ಯೇಕತೆಯನ್ನು ಅರಸುತ್ತಿದೆ. ದಲಿತ ಸಾಹಿತ್ಯ ಬುಡಕಟ್ಟು ಸಾಹಿತ್ಯ ಆದಿಯಾಗಿ ನಿರ್ಲಕ್ಷಿತ ಪರಂಪರೆಗಳೆಲ್ಲ ಸಮಾನತೆ ತೊರೆದು ವೈವಿಧ್ಯತೆ ಉಳಿಸಿಕೊಳ್ಳುತ್ತಿವೆ. ಈ ಎಲ್ಲ ಲಕ್ಷಣಗಳನ್ನು ಆಧುನಿಕೋತ್ತರ ಎನ್ನಬಹುದೇ.

ಈ ಆಧುನಿಕೋತ್ತರತೆ ಕನ್ನಡ ಸಾಹಿತ್ಯದಲ್ಲಿ ಸೃಷ್ಟಿ ಮಾಡಿರುವ ಸಮಸ್ಯೆ ಮತ್ತು ಸವಾಲುಗಳೇನು? ಎಂಬುದು ಪ್ರಸ್ತುತ ಚರ್ಚೆಯ ಕೇಂದ್ರ. ಕನ್ನಡ ಸಾಹಿತ್ಯ ತನ್ನ 1500 ವರ್ಷಗಳ ಚರಿತ್ರೆಯಲ್ಲಿ ತನ್ನ ದಿಕ್ಕನ್ನು ಬದಲಿಸಿದ ಎರಡು ಕಾಲಘಟ್ಟದಲ್ಲಿ ಪಡೆದ ಚಲನೆ ವಿಶಿಷ್ಟವಾದದು. ಹೊಸ ತಿರುವುಗಳು ಆಗಾಗ ಉಂಟಾಗಿ ಅದರ ಏಕತಾನತೆಯನ್ನು ತಪ್ಪಿಸಿದರು ಈ ಎರಡು ವಸಾಹತುಶಾಹಿ ಕಾಲಘಟ್ಟಗಳು ತಂದ ಮಾರ್ಪಾಡುಗಳು ಮುಖ್ಯವಾದವು.

ಇವೆರಡೇ ಮುಖ್ಯ ಘಟ್ಟಗಳು ಎನ್ನುವಂತಿಲ್ಲ. ಬಸವಣ್ಣ, ಹರಿಹರ, ಕುಮಾರವ್ಯಾಸ, ಮುದ್ದಣ, ಕುವೆಂಪು, ಬೇಂದ್ರೆ, ಅ.ನ.ಕೃ, ವಿ.ಕೃ ಗೋಕಾಕ್, ಗೋಪಾಲಕೃಷ್ಣ ಅಡಿಗ, ತೇಜಸ್ವಿ, ಸಿದ್ದಲಿಂಗಯ್ಯ, ಬರಗೂರು ಮೊದಲಾದವರು ತಮ್ಮ ತಮ್ಮ ಸಿದ್ಧಾಂತಗಳ ಮೂಲಕ ಹೊಸತನವನ್ನು ಅಳವಡಿಸುತ್ತಲೇ ಬಂದಿದ್ದಾರೆ. ಪ್ರತಿ ಕಾಲಘಟ್ಟವು ತನ್ನದೇ ಆದ ಅಜೆಂಡಾವನ್ನು ಮಂಡಿಸಿ ಮುನ್ನೆಲೆ ಪಡೆದಿದೆ ಹಾಗೂ ಬಾಳಿದೆ. ಈ ಹಿನ್ನೆಲೆಯಲ್ಲಿ ಸಮಕಾಲೀನ ಸಾಹಿತ್ಯದ ನಿಲುವುಗಳನ್ನು ಹೇಗೆ ಪತ್ತೆ ಹಚ್ಚುವುದು. ಯಾವೊಬ್ಬ ಲೇಖಕ, ಪಂಥ, ಪ್ರಕಾರ, ಸಿದ್ಧಾಂತಗಳ ಹರಿವಿಲ್ಲದಿದ್ದರೂ ಕಾಲದ ಹರಿವು ನಿರಂತರ. ಪ್ರಚಲಿತ ಕಾಲಮಾನವನ್ನು ಸಾಹಿತ್ಯದ ದೃಷ್ಟಿಯಿಂದ ಯಾವ ಕಾಲಘಟ್ಟವೆಂದು ಹೆಸರಿಸುವುದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ 1970ರ ದಶಕದಲ್ಲಿ ಕಾಣಿಸಿಕೊಂಡ ದಲಿತ ಸಾಹಿತ್ಯ ಅದರೊಂದಿಗೆ ಮುನ್ನೆಲೆಗೆ ಬಂದ ಬಂಡಾಯ ಸಾಹಿತ್ಯಗಳು ಇನ್ನು ಪ್ರಭಾವವನ್ನು ಉಳಿಸಿಕೊಂಡಿವೆ. ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ ಅವರು ಈ ಎರಡು ಸಾಹಿತ್ಯಿಕ ಪಂಥಗಳ ಪ್ರತಿನಿಧಿಗಳಾಗಿ ಉಳಿದೇ ಇದ್ದಾರಾದರೂ ಆ ಮಾರ್ಗದ ಪ್ರಭಾವ ಕನ್ನಡ ಸಾಹಿತ್ಯದಲ್ಲಿ ಉಳಿದಿದೆ ಎಂದು ಸಂಪೂರ್ಣವಾಗಿ ಒಪ್ಪಬಹುದೇ? ಇದೇ ವೇಳೆಗೆ ಹಲವು ಮಾರ್ಗಗಳನ್ನು ಬಿತ್ತರಿಸುತ್ತಿರುವ ಹಿರಿಯ ಲೇಖಕರ ಪಡೆಯು ಅಸ್ತಿತ್ವದಲ್ಲಿದೆ. ಪರಂಪರೆಯ ಸಾಹಿತ್ಯವೇ ಬೇಡ ಎನ್ನುವ ವಾದಕ್ಕೆ ಪ್ರತಿಯಾಗಿ ಪರಂಪರೆಯ ಸಾಹಿತ್ಯವನ್ನು ಪುನಃಸ್ಥಾಪಿಸಲು ಅದರೊಂದಿಗೆ ಅನುಸಂಧಾನಿಸುತ್ತಿರುವ ನರಹಳ್ಳಿ ಬಾಲಸುಬ್ರಮಣ್ಯ, "ಖಾಲಿಯಾಗಿರಿ ಗಾಳಿ ಬೆಳಕುಗಳು ತಾವಾಗಿಯೇ ಒಳಗೆ ಬರುತ್ತವೆ" ಎನ್ನುತ್ತ ಪೂರ್ವ ಪಶ್ಚಿಮಗಳ ಸಮನ್ವಯತೆ ಸಾರುತ್ತಿರುವ ಓ.ಎಲ್ ನಾಗಭೂಷಣ ಸ್ವಾಮಿ, ಶಾಸ್ತ್ರ ಸಾಹಿತ್ಯದಿಂದ ಸೃಜನ ಸಾಹಿತ್ಯವನ್ನು ರೂಪಿಸುತ್ತಿರುವ ಕೆ.ವಿ.ಎನ್, ಹೆಚ್.ಎಸ್ ಶಿವಪ್ರಕಾಶ್, ಬಸವರಾಜ್ ಕಲ್ಗುಡಿ, ಬಂಜಗೆರೆ ಜಯಪ್ರಕಾಶ್, ರಾಜೇಂದ್ರ ಚೆನ್ನಿ ಮೊದಲಾಗಿ ಹಲವರ ಹೆಸರುಗಳು

ಹಲವು ಮಾರ್ಗಗಳ ತೋರು ದಾರಿಗಳಾಗಿ ಮುನ್ನೆಲೆಯಲ್ಲಿವೆ. ನಟರಾಜ್ ಬೂದಾಳು, ರಹಮತ್ ತರೀಕೆರೆ ಮೊದಲಾದವರ ತಾತ್ವಿಕ ಅಧ್ಯಯನಗಳು ಒಂದೆಡೆಯಿವೆ. ಸ್ತ್ರೀವಾದಿ ಸಾಹಿತ್ಯದಲ್ಲಿ ಹೆಚ್. ಎಲ್ ಪುಷ್ಪ, ಶ್ರೀಮತಿ, ಪ್ರತಿಭಾ ನಂದಕುಮಾರ್, ವಿನಯಾ ಒಕ್ಕುಂದ, ಎಂ. ಎಸ್ ಆಶಾದೇವಿ, ತಾರಿಣಿ ಶುಭದಾಯಿನಿ, ಗೀತಾ ವಸಂತ, ಭಾನು ಮುಷ್ತಾಕ್, ಹೆಚ್ ಎಸ್ ಅನುಪಮಾ ಮೊದಲಾದವರು ವಿಭಿನ್ನ ದಾರಿ ಹಿಡಿದು ನಡೆಯುತ್ತಿದ್ದಾರೆ.

ಇನ್ನು ಕನ್ನಡ ಚಳುವಳಿಗಳನ್ನು ಸಾಹಿತ್ಯದ ಭಾಗವಾಗಿಯೇ ಮುನ್ನಡೆಸುತ್ತಿರುವ ಮಲ್ಲಿಕಾ ಘಂಟಿ, ಕೆ.ನೀಲಾ, ಮೀನಾಕ್ಷಿ ಬಾಳಿ, ಪುರುಷೋತ್ತಮ ಬಿಳಿಮಲೆ ಮೊದಲಾದವರಿದ್ದಾರೆ. ಪ್ರಕಾಶನ ಸಂಸ್ಥೆಗಳ ಮೂಲಕ ಸೈದ್ಧಾಂತಿಕ ನಡೆಯಲ್ಲಿರುವ ಅಭಿನವ, ಅಂಕಿತ, ಲಡಾಯಿ, ಮೊದಲಾದವುಗಳ ಸಾಹಿತ್ಯಿಕ ಕಾರ್ಯವು ಜೊತೆಯಲ್ಲಿದೆ. ಈ ಎಲ್ಲರ ಹಾದಿಗಳಲ್ಲೂ ಭಿನ್ನತೆಗಳಿವೆ. ಆದರೆ ಅವು ಸಾಮರಸ್ಯದಿ ಬಾಳುತ್ತಿವೆ. ಯಾರೊಬ್ಬರೂ ಯಾವೊಂದು ಮಾರ್ಗವನ್ನು ಅಧಿಕೃತವಾಗಿ ಸ್ಥಾಪಿಸುವ ಗೊಡವೆಗಿಳಿದಿಲ್ಲ. ಹಾಗಾಗಿ ಸಮಕಾಲೀನ ಕನ್ನಡ ಸಾಹಿತ್ಯದ ಸ್ಪಷ್ಟ ಚಹರೆಗಳನ್ನು ಗುರುತಿಸುವುದು ಹೇಗೆ. ಈ ಹಿರಿಪೀಳಿಗೆಯೊಂದಿಗೆ ಕಿರಿ ಪೀಳಿಗೆಯು ಸಾಹಿತ್ಯ ವೇದಿಕೆಯನ್ನು ಸ್ಥಾಪಿಸಿಕೊಳ್ಳುತ್ತಿದೆ. ಆರಿಫ್ ರಾಜ, ರಂಗನಾಥ ಕಂಟನಕುಂಟೆ, ಸುಭಾಷ್ ರಾಜಮಾನೆ, ಮೊದಲಾದವರು ಅಗಾಧ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದರೆ, ಒಂದೋ ಎರಡೋ ಪುಸ್ತಕ ಬರೆಯುತ್ತಲೇ ಕಣ್ಮರೆಯಾಗುವ ಪಡೆಯೂ ಇದೆ. ಇದರೊಂದಿಗೆ ಸೈದ್ಧಾಂತಿಕವಾಗಿಯೂ ಹಲವು ದಾರಿಗಳಿವೆ. ದಿನಕ್ಕೊಂದು ವ್ಯಕ್ತಿಗೊಂದು ವಾದಗಳು ಹುಟ್ಟಿಕೊಳ್ಳುತ್ತಿವೆ. ಒಂದು ಮತ್ತೊಂದರ ಹಂಗಿಲ್ಲದೆ ಪ್ರತಿಪಾದನೆಗೊಳ್ಳುತ್ತಿವೆ. ಆದರೆ ಅವುಗಳ ಸ್ಥಿತಿಸ್ಥಾಪಕತೆಯ ಬಗೆಗೆ ಈಗಲೇ ಏನನ್ನೂ ಹೇಳುವಂತಿಲ್ಲ. ಇದರ ಬೆನ್ನಲ್ಲೆ ವಚನಕಾರರ ಪಡೆಯೊಡೆದು ಸಾಮದಾಯಿಕ ಪ್ರತಿನಿಧೀಕರಣಕ್ಕೆ ತೊಡಗಿಕೊಂಡಿದೆ.

80ರ ದಶಕದಲ್ಲಿ ಮುನ್ನೆಲೆಗೆ ಬಂದ ಸಬಾಲ್ಟರ್ನ್ ಕಲ್ಪನೆ ಜಗತ್ತಿನಾದ್ಯಂತ ಎಲ್ಲಾ ಶಿಸ್ತುಗಳನ್ನು ಪ್ರಭಾವಿಸಿದ್ದರು ಅದರೊಂದಿಗೆ ಸಾಂಪ್ರದಾಯಿಕ ಹೆಜಮನಿಯು ತನ್ನ ಬೇರುಗಳನ್ನು ಸಡಿಲಿಸಿಲ್ಲ. ತನ್ನ ಧೋರಣೆಯನ್ನು ಅಷ್ಟೇ ಗಟ್ಟಿಯಾಗಿ ಸ್ಥಾಪಿಸಿಕೊಳ್ಳುತ್ತಿದೆ. ಪಶ್ಚಿಮವನ್ನು ನಿರಾಕರಿಸುತ್ತಲೇ ಅದರ ಜಾಗತೀಕರಣ ನೀತಿಯನ್ನು ವ್ಯಾಪಕವಾಗಿ ಒಪ್ಪುತ್ತಿರುವ ಪೂರ್ವರಾಷ್ಟ್ರಗಳ ಪರಿಷ್ಕೃತ ಬೌದ್ಧಿಕತೆಯು ಚಾಲನೆಯಲ್ಲಿದೆ. ಈ ಎಲ್ಲವೂ ಸದ್ಯ ಕನ್ನಡ ಸಾಹಿತ್ಯದ ವೈಶಿಷ್ಟತೆಗಳೆನ್ನಬೇಕು. ಇದೇ ವೈಪರಿತ್ಯಗಳು ಎಲ್ಲ ಕಾಲಘಟ್ಟದಲ್ಲೂ ಇದ್ದುವೇ ಅಥವಾ ಇದನ್ನು ಆಧುನಿಕ ಕಾಲದ ವಿಶೇಷತೆ ಎನ್ನಬೇಕೇ?

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಲಕ್ಷಣವನ್ನು ಎಲ್ಲಾ ಕಾಲಘಟ್ಟಗಳು ತೋರುತ್ತವೆ. ಪ್ರಾಚೀನ ಜೈನಕವಿಗಳ ಕಾಲವನ್ನೇ ಲಕ್ಷಿಸಿದರು, ಆ ಘಟ್ಟದ ಕವಿಗಳನ್ನೆಲ್ಲ ಒಂದು ಪಂಥವಾಗಿಸಿದ್ದು ನಮ್ಮ ಏಕಮುಖಿ ಸಾಹಿತ್ಯ ಚರಿತ್ರೆಗಳೇ ಎಂಬ ಸಂದೇಹ ಕಾಡುತ್ತದೆ. ಪಂಪನೊಂದಿಗೆ ಬರೆದ ರನ್ನ, ಪೊನ್ನ, ದುರ್ಗಸಿಂಹ, ನಾಗವರ್ಮ, ನಾಗಚಂದ್ರ, ಜನ್ನ ಇವರೆಲ್ಲ ಒಂದೇ ಮಾರ್ಗದ ಪ್ರತಿಪಾದಕರಂತೆ ಕಾಣುತ್ತಾರೆಯೇ? ಅವರ ಧಾರ್ಮಿಕ ವಿಂಗಡಣೆಯನ್ನು ತೊರೆದು ಸಾಹಿತ್ಯಿಕ ವಿಂಗಡಣೆಗೆ ತೊಡಗಿದರೆ ಇವರೆಲ್ಲ ಒಂದೇ ಮೇಜಿಗೆ ಕುರ್ಚಿ ಹಾಕಿಸಿ ಕೂರುತ್ತಾರೆಯೇ? ಮೇಜಿಗೆ ಒರಗಿದ್ದರೂ ಕುರ್ಚಿಗಳು ಭಿನ್ನ ದಿಕ್ಕಿಗೆ ಮುಖ ಮಾಡಿರುವಂತೆ ಕಾಣುವುದಿಲ್ಲವೇ. ವಚನಕಾರರನ್ನೇ ತೆಗೆದುಕೊಳ್ಳಿ ಅವರಿದ್ದ ಕಾಲಘಟ್ಟ ಹೊರತಾಗಿ ವೀರಶೈವ ಎನ್ನುವ ನಿರ್ಮಿತ ಚೌಕಟ್ಟು ತೊರೆದು ನೋಡಿದರೆ ಬಸವಣ್ಣ, ಅಲ್ಲಮ, ಅಕ್ಕ ಇವರೆಲ್ಲರೂ ಒಂದೆಡೆ ಕೂತಂತಿದ್ದರೂ ಸೈದ್ಧಾಂತಿಕವಾಗಿ ಒಂದೆನ್ನಬಹುದೇ?

ಒಂದೇ ಗೂಡಿನಿಂದ ಹೊರಟರೂ ಭಿನ್ನ ದಿಕ್ಕಿಗೆ ಹಾರಿದ ಖಗಗಳಲ್ಲವೇ? ಹಾಗಾಗಿ ಕನ್ನಡ ಸಾಹಿತ್ಯ ಈ ಬಹುತ್ವವನ್ನು ಎಂದಿಗೂ ಕಾಪಾಡಿಕೊಂಡು ಬಂದಿದೆ ಎನ್ನಬೇಕು. ಇದನ್ನು ಆಧುನಿಕೋತ್ತರ ಕಾಲ ಹೇಗೆ ನಿಭಾಯಿಸಬೇಕಾಗಿದೆ ಎಂಬ ಪ್ರಶ್ನೆಗಷ್ಟೆ ಈಗ ಎಡೆ ಕೊಟ್ಟುಕೊಳ್ಳಬೇಕು ಮತ್ತು ಅದಕ್ಕೆ ಉತ್ತರ ಕಂಡುಕೊಳ್ಳಬೇಕು.

ಇದು ಉತ್ತರವಾದಗಳ ಕಾಲ. ಹಾಗೇ ನೋಡಿದರೆ ಒಂದರ ನಂತರ ಒಂದು ಎಂಬಂತೆ ಹುಟ್ಟಿಕೊಂಡ ವಾದಗಳೆಲ್ಲ ಉತ್ತರವಾದಗಳೇ. ಆದರೂ ಈ ಘಟ್ಟವನ್ನು ಉತ್ತರವಾದಗಳ ಕಾಲ ಎಂತಲೇ ಕರೆದುಕೊಳ್ಳಲಾಗಿದೆ. ಎಲ್ಲಾ ಜ್ಞಾನಶಿಸ್ತುಗಳಲ್ಲೂ ಇಂದು ತನ್ನ ಹಿಂದಿನ ಸ್ಥಿತಿಗೆ ವಿರೋಧ ತೋರುವ ಅಸಂಖ್ಯಾತ ಉತ್ತರವಾದಗಳು ಬೆಳೆದುಬಂದಿವೆ. ಈ ಉತ್ತರವಾದಗಳೊಂದಿಗೆ ಕನ್ನಡ ಸಾಹಿತ್ಯ ಕಂಡುಕೊಂಡ ಸಂಬಂಧ ಎಂತಹುದು. ಯಾವ ಉತ್ತರವಾದಗಳೊಂದಿಗೆ ಕನ್ನಡ ಸಾಹಿತ್ಯ ಮುಖಾಮುಖಿಯಾಗಿದೆ. 18ನೇ ಶತಮಾನದ ಹೊತ್ತಿಗೆ ಆಧುನಿಕ ಎನ್ನುವ ಕಾಲಘಟ್ಟ ಬೆಳೆದು ಬಂದಿತೆಂದಾದರೆ ಆಧುನಿಕೋತ್ತರ ಎನ್ನುವ ಕಾಲ ಪಕ್ವಗೊಳ್ಳುವುದು 1980ರ ದಶಕದ ನಂತರ. ಸಾಹಿತ್ಯ ರಚನೆ, ಭಾಷೆ, ಚಿಂತನಾಕ್ರಮಗಳೆಲ್ಲ ಈ ಉತ್ತರವಾದಗಳಿಂದ ಸಂಶ್ಲೇಷಿಸಲ್ಪಟ್ಟಿವೆ.

ವಸಾಹತೋತ್ತರ ವಾದ, ಸಂರಚನೋತ್ತರವಾದ, ರಾಚನಿಕೋತ್ತರವಾದ ಹೀಗೆ ಹುಟ್ಟಿ ಬಂದ ಆಧುನಿಕೋತ್ತರವಾದಗಳ ಒಟ್ಟಾರೆ ಗುರಿಯೆಂದರೆ 'ಅವಕೇಂದ್ರೀಕರಣ'. ಸಾಹಿತ್ಯ, ಕಲೆ ಇತ್ಯಾದಿ ಎಲ್ಲಾ ಜ್ಞಾನಶಿಸ್ತುಗಳು ಯಾವುದನ್ನು ಕೇಂದ್ರವಾಗಿರಿಸಿಕೊಳ್ಳದೆ ಒಡೆದು ಸಾಗಬೇಕು ಎಂಬುದು ಆಧುನಿಕೋತ್ತರ ವಾದಗಳ ತಿರುಳು. ಈ ಘಟ್ಟದ ಮತ್ತೊಂದು ಪ್ರಮುಖ ಲಕ್ಷಣ ಲೇಖಕನ ವ್ಯಕ್ತಿತ್ವದ ಗೌಣತೆ. ಆದರೆ ಈ ಎಲ್ಲ ಗುಣಗಳನ್ನು ಪಟ್ಟಿ ಮಾಡಿದರೆ ಅದು ನಮ್ಮ ಪರಂಪರೆಯ ಸಾಹಿತ್ಯದ ಗುಣಗಳನ್ನೇ ಪ್ರಕಟಿಸಿದಂತಿದೆ. ಒಂದು ಕಾಲಘಟ್ಟದಲ್ಲಿ ಮೂಡಿಬಂದ ಚಿಂತನೆಗಳನ್ನು ಅಲ್ಲಗೆಳೆಯುವ ಮೂಲಕ ಅಥವಾ ಒಂದು ಕಾಲಘಟ್ಟ ಒಪ್ಪಿಕೊಂಡ ಸಂಗತಿಗಳನ್ನು ಪ್ರಶ್ನಿಸುವ, ಸಂದೇಹಿಸುವ ಮುಖೇನ ಅದರ ನಂತರದ ಕಾಲಘಟ್ಟ ಪ್ರತ್ಯೇಕತೆಯನ್ನು ಸಾಧಿಸಿಕೊಳ್ಳುತ್ತದೆ. ಅನಂತರ ಅದು ಹೊಸದೊಂದು ಚರಿತ್ರೆ ನಿರ್ಮಿಸಬಹುದು. ಇಲ್ಲವೇ ಚಲನೆ ಪಡೆಯದಿರಬಹುದು. ಅದು ಬಹುಜನ ಸಮಾಜವನ್ನು ಆಧರಿಸುತ್ತದೆ.

ಆಧುನಿಕ ಕಾಲಘಟ್ಟದಲ್ಲಿ ಒಬ್ಬ ನಿರ್ಮಾತೃವಿಲ್ಲ, ಹಲವರಿದ್ದಾರೆ ಎನ್ನುವುದಾದರೆ ಇದೇ ಲಕ್ಷಣ ಪ್ರಾಚೀನ ಸಾಹಿತ್ಯದಲ್ಲಿಯೂ ಇದೆ. ಆದಿಕವಿಯೆನಿಸಿದ ಪಂಪನ ಹಾದಿಯನ್ನು ರನ್ನ, ರನ್ನನ ಹಾದಿಯನ್ನು ಪೊನ್ನ ಯಥಾವತ್ತಾಗಿ ಅನುಸರಿಸಿಲ್ಲ. ಸಮಕಾಲೀನ ಒತ್ತಡಗಳನ್ನು ನಿರ್ದೇಶಿಸಿಕೊಳ್ಳುತ್ತಲೇ ಅನ್ಯ ಮಾರ್ಗ ಹಿಡಿದಿದ್ದಾರೆ. ಲೇಖಕನ ಕೃತಿ ತನ್ನ ಸುತ್ತಣ ಜಗತ್ತನ್ನು ಒಪ್ಪುತ್ತದೆ. ಆ ಜಗತ್ತಿನಾಚೆಗೆ ಮತ್ತೇನನ್ನೋ ಪ್ರಸ್ತಾಪಿಸಲು ಯತ್ನಿಸುತ್ತಿರುತ್ತದೆ. ಈ ನೆಲೆಯಲ್ಲಿ ಆಧುನಿಕೋತ್ತರ ಎನ್ನುವ ಈ ಕಾಲಘಟ್ಟದ ರೂಪುರೇಷೆಗಳು ಹಳೆಯ ಸಾಹಿತ್ಯದಿಂದಲೇ ಒಡಮೂಡಿದೆ. ಆದಾಗ್ಯೂ ಇದು ವಿಪರೀತ ವೈವಿಧ್ಯಗಳ ಯುಗ ಎನ್ನಲು ಅಡ್ಡಿಯಿಲ್ಲ. ಈ ಕುರಿತು ಶ್ರೀಧರ್ ಹೆಗಡೆ ಭದ್ರನ್ ಅವರು ಕನ್ನಡ ಸಾಹಿತ್ಯದ ಪ್ರಚಲಿತ ಕಾಲವನ್ನು ಚಳುವಳಿರಹಿತ ಎಂದೇ ಗುರುತಿಸಲಾಗುತ್ತಿದೆ. ಅಂದಾಕ್ಷಣ ಇದು ಸ್ಥಗಿತ ಕಾಲಘಟ್ಟವಲ್ಲ. ಇಪ್ಪತ್ತನೆಯ ಶತಮಾನದ ಕೊನೆಯ ದಶಕದವರೆಗೆ ಸಾಹಿತ್ಯದ ಬೆಳವಣಿಗೆಯನ್ನು ಐತಿಹಾಸಿಕವಾಗಿ ನೋಡಬಹುದಾದ ವಿಶಿಷ್ಟ ಪ್ರವೃತ್ತಿ ಒಂದೊಂದು ಕಾಲಘಟ್ಟದಲ್ಲಿ ನಿರ್ದಿಷ್ಟವಾಗಿ ಸಾಧ್ಯವಾಗಿತ್ತು. ಅದಕ್ಕೆ ಆಯಾ ಕಾಲದ ಸಂವೇದನೆಯಲ್ಲಿ ಉಂಟಾದ ಬದಲಾವಣೆ ಹಾಗೂ ಅದಕ್ಕೆ ಕಾರಣವಾದ ಪ್ರೇರಣೆಗಳ ಒತ್ತಡವಿತ್ತು. ಹೀಗಾಗಿ ಹಲವಾರು

ಸೈದ್ಧಾಂತಿಕತೆಗಳನ್ನು ಜೀರ್ಣಿಸಿಕೊಂಡ ಸಾಹಿತ್ಯದ ವೈಚಾರಿಕತೆಯನ್ನು ಗುರುತಿಸಲು ಸಾಧ್ಯವಾಯಿತು. ಹಿಂದಿನ ಸಾಹಿತ್ಯಕ್ಕಿಂತ ಭಿನ್ನವಾದ ಮುಂದುವರಿಕೆಯೆನಿಸುವ ಸಮಕಾಲೀನ ಕನ್ನಡ ಸಾಹಿತ್ಯದ ಸ್ಥಿತಿಗಳನ್ನು ಗಮನಿಸಿ ವ್ಯಾಖ್ಯಾನಿಸಬಹುದು. ಅದರ ಸ್ವರೂಪ ಇಡಿಯಾಗಿ ಹೀಗೆಯೇ ಎಂದು ತಲೆಬರಹ ಕೊಡುವುದು ಸಾಧ್ಯವಿಲ್ಲ ಹಾಗೂ ಅದು ಸಾಧುವೂ ಅಲ್ಲ. ಇಂದು ಸಾಹಿತ್ಯ ನಿರ್ಮಿತಿಯ ಮೇಲೆ ಆಗುತ್ತಿರುವ ಪ್ರಭಾವಕ್ಕೆ ಯಾವುದೇ ನಿರ್ದಿಷ್ಟ ವಾದಗಳ ಚಹರೆಯಿಲ್ಲ. ಅದು ಹಲವಾರು ವೈಚಾರಿಕತೆಗಳನ್ನು ತನ್ನೊಳಗು ಮಾಡಿಕೊಂಡಿರುವ ಸಂಯುಕ್ತ ಪ್ರತಿಮೆ''. ಎನ್ನುತ್ತಾರೆ.

ಈ ನೆಲೆಯಲ್ಲಿ ಈ ಕಾಲಘಟ್ಟ ತನ್ನ ಬಹುವಿಧತೆಯ ಕಾರಣದಿಂದ ಉದ್ಭವಿಸಿಕೊಳ್ಳಬಹುದಾದ ಸಮಸ್ಯೆಗಳನ್ನು ರಹಮತ್ ತರೀಕೆರೆಯವರು ಹೀಗೆ ಸಂಗ್ರಹಿಸುತ್ತಾರೆ. ''ಆಧುನಿಕೋತ್ತರ ಚಿಂತನೆಯ ಮೇಲೆ ಗಂಭೀರ ಪ್ರಶ್ನೆಗಳನ್ನು ಅದರ ಟೀಕಾಕಾರರು ಎತ್ತಿದ್ದಾರೆ: 'ಇದು ನನಗೆ ಕಂಡ ಸತ್ಯವೇ ಅಂತಿಮ ಎಂಬ ವ್ಯಕ್ತಿವಿಶಿಷ್ಟ ವಾದವನ್ನು ಬೆಳೆಸುತ್ತದೆ. ಇದು ತನ್ನ ಅತಿಯಲ್ಲಿ, ಎಲ್ಲರೂ ತಂತಮ್ಮ ಸತ್ಯಗಳಿಗೆ ಅಂಟಿಕೊಂಡು ದ್ವೀಪಗಳಾಗಿಬಿಡುವ, ತಂತಮ್ಮ ದೃಷ್ಟಿಗಳಿಗೆ ಬದ್ಧವಾಗಿ ಛಿದ್ರವಾಗುವ ಅರಾಜಕ ಹಂತಕ್ಕೆ ಒಯ್ಯಬಹುದು. ಎಲ್ಲರೂ ಸಮಾನ ಕಾರಣಕ್ಕಾಗಿ ಕೂಡುವ, ಮತ್ತೊಬ್ಬರ ದೃಷ್ಟಿಕೋನದ ಜತೆ ಕೊಡುಕೊಳು ಮಾಡುತ್ತ ಲೋಕಪರಿವರ್ತನೆ ಮಾಡುವ ಸಾಧ್ಯತೆಯನ್ನೇ ಕಳೆದು ಹಾಕಬಹುದು'' ಎನ್ನುತ್ತಾರೆ. ಸಾಂಸ್ಕೃತಿಕ ಅಧ್ಯಯನವನ್ನು ಕುರಿತು ಅವರು ಹೇಳುವ ಈ ಮಾತುಗಳು ಸಾಹಿತ್ಯ ರಚನೆಗೂ ಅನ್ವಯಿಸುತ್ತವೆ. ಇಂದು ಕನ್ನಡ ಸಾಹಿತ್ಯವು ಬಹುತ್ವದ ಪರಿಧಿಯಲ್ಲಿ ಚಲಿಸುತ್ತಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿದೆಯಾದರೂ ಈ ಬಹುತ್ವವನ್ನು ಒಪ್ಪಿಕೊಳ್ಳುವುದು ಲೇಖಕ ಸಹೃದಯರ ಎದುರಿರುವ ಪ್ರಶ್ನೆಯಾಗಿದೆ. ವಿಭಿನ್ನ ಪ್ರಾದೇಶಿಕತೆ, ಪರಿಕಲ್ಪನೆ, ಸಂಸ್ಕೃತಿ, ಸಮುದಾಯ, ಸಾಮಾಜಿಕ, ಪಾಂಥಿಕ, ಜಾನಪದೀಯ ಅಧ್ಯಯನಗಳು ಸಾಮರಸ್ಯವನ್ನು ಸಾಧಿಸಬೇಕಿದೆ. ಸಾಮರಸ್ಯವೆಂದರೆ ಒಂದುಗೂಡಿಕೆ ಎನ್ನುವುದಕ್ಕಿಂತ ಪರಸ್ಪರ ಒಪ್ಪಿಕೊಳ್ಳುವಿಕೆಯಾಗಿ ಕಾಣಬೇಕಿದೆ. ಭಾರತದಂತಹ ವೈವಿಧ್ಯತೆಯ ರಾಷ್ಟ್ರದಲ್ಲಿ ಸಾಹಿತ್ಯದಲ್ಲಿಯೂ ಆ ಗುಣಗಳು ಗೋಚರಿಸುವುದು ಅಚ್ಚರಿಯ ಸಂಗತಿಯಲ್ಲ. ಈ ಬಹುತ್ವವನ್ನು ಕಲೆ, ಸಾಹಿತ್ಯ, ಚರಿತ್ರೆ, ಎಲ್ಲ ಶಿಸ್ತುಗಳು ಒಪ್ಪಿಕೊಳ್ಳಬೇಕಿದೆ.

ಇಲ್ಲವಾದಲ್ಲಿ ಕನ್ನಡ ಸಾಹಿತ್ಯ ನೀಗದ ಗೊಂದಲಗಳ ಗೂಡಾದರೂ ಅಚ್ಚರಿಯಿಲ್ಲ. ಸಾಹಿತ್ಯ ರಚನೆಯಲ್ಲಿ ಬಹುಶಿಸ್ತೀಯ ಅಧ್ಯಯನಗಳು ಎಡೆಪಡೆಯುತ್ತಿವೆ. ಭಿನ್ನ ಶಿಸ್ತುಗಳ ಸ್ಪರ್ಶ ಸಾಹಿತ್ಯಕ್ಕೆ ಹೊಸ ರೂಪ ನೀಡುತ್ತಿದೆ. ಈ ಎಲ್ಲವುಗಳಿಗೆ ಹಿನ್ನೆಲೆಯಾಗಿ 'ಸಬಾಲ್ಟರ್ನ್ ಓದು' ಎಡೆಪಡೆದಿದೆ. ನಿರ್ಲಕ್ಷಿತ ವಿಚಾರಗಳೆಲ್ಲ ಮುನ್ನೆಲೆಗೆ ಬರುತ್ತಿವೆ. ಇದು ಬಹು ಮಾದರಿಗಳ ಕಾಲ. ಈ ಬಹುತ್ವವನ್ನು ಸ್ವೀಕರಿಸುವ ಸಿದ್ಧತೆಗಳು ಓದುಗ ವಲಯಕ್ಕೆ ಬೇಕು. ಜನಜೀವನದ ಮುಖ್ಯ ಅಮುಖ್ಯ ವಿಚಾರಗಳೆಲ್ಲ ಸಾಹಿತ್ಯದಲ್ಲಿ ಎಡೆಪಡೆಯುತ್ತಿವೆ. ಯಾವುದನ್ನು ಅಮುಖ್ಯ ಎಂದು ನಿರ್ಲಕ್ಷಿಸಲಾಗಿತ್ತೋ ಆ ಸಮುದಾಯಗಳ ವಿಚಾರಗಳೇ ಮುಖ್ಯ ವೇದಿಕೆಯಲ್ಲಿವೆ. ಇವು ಒಂದು ಮತ್ತೊಂದಕ್ಕೆ ಪೈಪೋಟಿಯಾಗದೆ ಎಲ್ಲರ ಅಭಿವ್ಯಕ್ತಿಯನ್ನು ಎಲ್ಲರು ಗ್ರಹಿಸುವಂತಾಗಬೇಕು. ದಲಿತರು, ಮಹಿಳೆಯರು, ಬುಡಕಟ್ಟುಗಳು, ಅಲ್ಪಸಂಖ್ಯಾತರು ಮೊದಲಾದ ಶೋಷಿತ ಸಮುದಾಯಗಳು ಸಾಹಿತ್ಯ ರಚನೆಯಲ್ಲಿ ಮುನ್ನೆಲೆ ಪಡೆಯುತ್ತಿವೆ. ಈ ಸಮುದಾಯಗಳು ಸಾಹಿತ್ಯದ ಮೂಲಕ ತಾವು ಕಂಡುಂಡ ಯಾತನೆಯ ಬದುಕನ್ನು ದಾಖಲಿಸುತ್ತಿದ್ದು ಇದು ಸಂಘರ್ಷದ ಹಾದಿ ಹಿಡಿಯುವ ಸವಾಲು ಎದುರಾಗಬಹುದು.

ಅಲಕ್ಷಿತ ಸಮುದಾಯಗಳ ಲೇಖಕರ ಅನುಭವ ವೈವಿಧ್ಯ ತಿಳಿವಿನ ಹಾದಿಯಾಗಬೇಕು. ಅಲಕ್ಷಿತ ಸಮುದಾಯಗಳು ಸ್ವಾಭಿಮಾನದಿಂದ ತಲೆ ಎತ್ತಲು ದೀನ ವರ್ಗಗಳು ನ್ಯಾಯಯುತ ಸಮಾಲೋಚನೆಗೆ ಒಳಗಾಗಲು ಸಾಹಿತ್ಯ ವೇದಿಕೆಯನ್ನು ಕಲ್ಪಿಸಬೇಕು.

### ಪರಾಮರ್ಶನ ಗ್ರಂಥಗಳು:

1. ಸೀತಾರಾಮಯ್ಯ ಎಂ.ವಿ., (2005), ಕವಿರಾಜಮಾರ್ಗಂ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
2. ರಾಮಚಂದ್ರನ್ ಸಿ.ಎನ್., (1990), ವಸಾಹತೋತ್ತರ ಚಿಂತನೆ, ಬೆಂಗಳೂರು: ಅಂಕಿತ ಪುಸ್ತಕ.
3. ಶ್ರೀಧರ್ ಹೆಗಡೆ ಭದ್ರನ್, (2018), ಸಾಹಿತ್ಯ ಚಳುವಳಿಗಳು, ಬೆಂಗಳೂರು: ಅಭಿನವ ಪ್ರಕಾಶನ.
4. ರಹಮತ್ ತರೀಕೆರೆ, (2004), ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು: ಅಭಿನವ ಪ್ರಕಾಶನ.
5. ಮುಗಳಿ ರಂ. ಶ್ರೀ., (1953), ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು: ಗೀತಾ ಬುಕ್ ಹೌಸ್.
6. ಶಿವರುದ್ರಪ್ಪ ಜಿ.ಎಸ್., (1975), ಕನ್ನಡ ಸಾಹಿತ್ಯ ಸಮೀಕ್ಷೆ, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.
7. ಕೀರ್ತಿನಾಥ ಕುರ್ತಕೋಟಿ, (2008), ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ಧಾರವಾಡ: ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್.
8. ಗಿರಡ್ಡಿ ಗೋವಿಂದರಾಜ್, (1981), ಸಾಹಿತ್ಯ ಮತ್ತು ಪರಂಪರೆ, ಬೆಂಗಳೂರು: ಹೇಮಂತ ಪ್ರಕಾಶನ.
9. ನರಹಳ್ಳಿ ಬಾಲಸುಬ್ರಹ್ಮಣ್ಯ, (2024), ಕನ್ನಡ ಸಾಹಿತ್ಯ ಪರಂಪರೆ ಮತ್ತು ವರ್ತಮಾನ, ಬೆಂಗಳೂರು: ಅಭಿನವ ಪ್ರಕಾಶನ.
10. ಶೇಷಗಿರಿರಾವ್ ಎಲ್.ಎಸ್., (1975), ಹೊಸಗನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.
11. ಅನಂತನಾರಾಯಣ ಎಸ್., (1962), ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ, ಮೈಸೂರು: ಡಿ.ವಿ.ಕೆ. ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.